**OS. No. 21/2023** **PW – 1**

ಪ್ರಮಾಣೀಕರಿಸಲಾದ ದಿನಾಂಕಃ **24.09.2025.**

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.**AM** ವಕೀಲರಿಂದಃ</u>

ನಾನು 4 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಓದಲು ಬರೆಯಲು ಬರುತ್ತದೆ ಎಂದರೆ ಸ್ವಲ್ಪ ಮಟ್ಟಿಗೆ ಓದುತ್ತೇನೆ. ಶಿವಯ್ಯ , ದೇವೀರಮ್ಮ ಮತ್ತು ಚೆನ್ನಬಸವಯ್ಯರವರ ನಡುವೆ ಭಾಗವಾಗಿರುತ್ತದೆ. ಶಿವಯ್ಯ ನನ್ನ ದೊಡ್ಡಪ್ಪ ದೇವೀರಮ್ಮ ನನ್ನ ದೊಡ್ಡಮ್ಮ( 2 ನೇ ದೊಡ್ಡಪ್ಪನ ಹೆಂಡತಿ). ದೇವೀರಮ್ಮರವರ ಗಂಡ ಆ ಕಾಲಕ್ಕೆ ಮರಣಹೊಂದಿದ್ದರು ಎಂದರೆ ಸರಿ. ಹಾಗಾಗೀ ಚೆನ್ನಬಸವಯ್ಯ ನನ್ನ ತಂದೆ 3 ನೇ ಮಗ ಎಂದರೆ ಸರಿ. ನನ್ನ ದೊಡ್ಡಪ್ಪ ತೀರಿ ಹೋದ ಕಾಲಕ್ಕೆ ಶಿವಯ್ಯ ಮತ್ತು ಚೆನ್ನಬಸವಯ್ಯ ಮನೆ ಆಡಳಿತ ನೋಡಿಕೊಳ್ಳುತ್ತಿದ್ದರು ಎಂದರೆ ಅವರವರ ಮನೆ ಆಡಳಿತ ನೋಡಿಕೊಳ್ಳುತ್ತಿದ್ದರು ಎಲ್ಲರೂ ಬೇರೆ ಬೇರೆ ಇದ್ದರು. ಯಾವ ಇಸವಿಯಿಂದ ಬೇರೆ ಇದ್ದರು ಗೊತ್ತಿಲ್ಲ, ಆಗ ನಾನು ಹುಟ್ಟಿರಲಿಲ್ಲ. ಈಗ ನನಗೆ 62 ವರ್ಷ. ಭಾಗ ಯಾವ ಇಸವಿಯಲ್ಲಿ ಆಗಿರುತ್ತದೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ದಾಖಲೆ ಸಲ್ಲಿಸಿರುವ ಕಾಲದಲ್ಲಿಯೂ ಸಹ ಯಾವ ಇಸವಿಯಲ್ಲಿ ವಿಭಾಗ ಆಗಿರುತ್ತದೆ ತಿಳಿದುಕೊಂಡಿರುವುದಿಲ್ಲ. ಯಾರ ನಡುವೆ ಭಾಗ ಆಗಿರುತ್ತದೆ ಎಂದರ ದೇವೀರಮ್ಮ, ಶಿವಯ್ಯ ಮತ್ತು ಚೆನ್ನಬಸವಯ್ಯರವರ ನಡುವೆ ಆಗಿರುತ್ತದೆ.

ದೇವೀರಮ್ಮ ಮತ್ತು ಶಿವಯ್ಯ ಇಬ್ಬರೂ ಅವಿದ್ಯಾವಂತರು ಎಂದರೆ ದೇವೀರಮ್ಮರವರ ಬಗ್ಗೆ ಗೊತ್ತಿಲ್ಲ ಶಿವಯ್ಯರವರು ಓದುತ್ತಿದ್ದರು ಸಹಿ ಮಾಡುತ್ತಿದ್ದರು. ನನ್ನ ತಂದೆ ಸಹಿ ಮಾಡುತ್ತಿದ್ದರು ಓದಲು ಬರುತ್ತಿರಲಿಲ್ಲ. ವಿಭಾಗ ಆದ ಕಾಲಕ್ಕೆ ಅವರ ಹಿಸ್ಸಾ ಜಮೀನಿನಲ್ಲಿ ಅವರವರ ಹಿಸ್ಸಾ ಜಮೀನನ್ನು ಹಂಚಿಕೊಂಡು ಕಲ್ಲುಗಳು ಇಟ್ಟಿದ್ದರು ಎಂದರೆ ಸರಿಯಲ್ಲ.

ಯಾವ ಆಧಾರದ ಮೇಲೆ ಪ್ರತಿವಾದಿಯರು ಒತ್ತುವರಿ ಮಾಡಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ 2019 ರಲ್ಲಿ ದೇವೀರಮ್ಮರವರ ಮಕ್ಕಳು ದುರಸ್ಥು ಮಾಡಿಸಿರುತ್ತಾರೆ 2020 ರಲ್ಲಿ ನಾನು ಹದ್ದುಬಸ್ತು ಮಾಡಿಸಿರುತ್ತೇನೆ ಆಗ ಗಡಿ ಗುರುತು ಆಗಿರುತ್ತದೆ. ಈ ಸಂಬಂಧ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ. ಅದರಲ್ಲಿ ಒತ್ತುವರಿ ಆಗಿರುವ ಬಗ್ಗೆ ತಿಳಿದುಕೊಂಡಿರುತ್ತೇನೆ. ಅಳತೆ ಕಾರ್ಯಕ್ಕೆ ಬಂದು ನನಗೆ ದಾಖಲೆ ಓದಿ ಸಹಿಪಡೆದಿರುತ್ತಾರೆ. ಸಾಕ್ಷಿಯು ನಿಪಿ.6 ರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. 2019 ನೇ ಇಸವಿಯಲ್ಲಿ ಅರ್ಜಿದಾರನಾಗಿ ಅಳತೆ ಮಾಡಿಸಲು ಅರ್ಜಿ ಹೂಡಿದ್ದು ಅದರಂತೆ ಮಹಜರ್ ಜರುಗಿಸಿ ಎಲ್ಲಾ ಸರಿ ಇರುತ್ತದೆ ಎಂದು ಓದಿ ತಿಳಿದುಕೊಂಡ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ದೇವೀರಮ್ಮನ ಮಗ ನನ್ನನ್ನು ಕರೆದುಕೊಂಡು ಹೋಗಿ ಸಹಿ ಮಾಡಿಸಿರುತ್ತಾನೆ. ನಿಪಿ.6 ರ ದಾಖಲೆ ಸರಿ ಇರುತ್ತದೆ. ನಿಪಿ.6 ರ ಮಹಜರಿನಂತೆ ನಿಪಿ.7 ಮತ್ತು 8 ದಾಖಲೆಗಳು ತಯಾರಾಗಿರುತ್ತವೆ ಎಂದರೆ ಸರಿ. ನಿಪಿ.8 ನನ್ನ ಎದುರು ತಯಾರಾಗಿರುತ್ತದೆ ಎಂದರೆ ಸರಿ.

ಹದ್ದುಬಸ್ತು ನಕ್ಷೆ ತಯಾರಿಸುವಾಗ ಒತ್ತುವರಿದಾರರನ್ನು ನಕ್ಷೆಯಲ್ಲಿ ತೋರಿಸುತ್ತಾರೆ ಎಂದರೆ

ಹಾಗೆ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಒತ್ತುವರಿಯಾಗಿದ್ದಲ್ಲಿ ಸರ್ವೇಯರ್ ಕಡ್ಡಾಯವಾಗಿ ನಕ್ಷೆಯಲ್ಲಿ ತೋರಿಸಿರುತ್ತಾರೆ ಎಂದರೆ ನಮ್ಮ 1 ಎಕರೆ 31 ಗುಂಟೆ ಜಮೀನಿಗೆ ಕಲ್ಲು ನೆಟ್ಟಿ ಹೋಗಿರುತ್ತಾರೆ. ಯಾವುದೇ ಒತ್ತುವರಿಯಾಗಿರುವುದಿಲ್ಲ ಎಂದರೆ ಪಕ್ಕದವರು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಒತ್ತುವರಿಯ ಜಾಗವನ್ನು ತೋರಿಸದ ಬಗ್ಗೆ ಸರ್ವೇಯರ್ ನ ಪ್ರಶ್ನಿಸಿರುತ್ತೀರಾ ಎಂದರೆ ನಿಪಿ.8 ನ್ನು 2020 ರಲ್ಲಿ ವಾಡಿಸಿದ್ದು 2021 ರಲ್ಲಿ ಪುನಃ ಹದ್ದುಬಸ್ತು ಮಾಡಿಸಿರುತ್ತೇನೆ ಅದರ ದಾಖಲೆ ಇರುತ್ತದೆ. ಸದರಿ ವಿಚಾರಗಳನ್ನು ವಾದ ಪತ್ರ ಮತ್ತು ಪ್ರಮಾಣ ಪತ್ರ ಗಳಲ್ಲಿ ತಿಳಿಸಿರುತ್ತೇನೆ. ವಾದ ಪತ್ರದಲ್ಲಿ10 ಗುಂಟೆ ಒತ್ತುವರಿಯಾಗಿರುತ್ತದೆ ಎಂದು ಹೇಳಿರುತ್ತೇನೆ.

ನನ್ನ ಜಮೀನಿನ ಭಾವಚಿತ್ರ ವನ್ನು ನೋಡಿದರೆ ಗುರುತಿಸುತ್ತೇನೆ. ಸರ್ವೇಯರ್ ಬಂದು ಕಲ್ಲು ನೆಟ್ಟಿರುವುದು ಇವತ್ತಿಗೂ ಹಾಗೆಯೇ ಇರುತ್ತದೆ ಎಂದರೆ ಸರಿ. ಈಗ ಸಾಕ್ಷಿಗೆ ಒಂದು ಫೋಟೋವನ್ನು ತೋರಿದ್ದು ಅದರಲ್ಲಿ ಕಾಣುವ ತೆಂಗಿನ ತೋಟ ಯಾರದ್ದು ಎಂದರೆ ಅದು ನಮ್ಮ ತೋಟ ಎಂದು ನೋಡಿ ಒಪ್ಪಿದ ಮೇರೆಗೆ ಅದನ್ನು <u>**ನಿಡಿ.1**</u> ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಫೋಟೋವನ್ನು ತೋರಿಸಿ ಅದು ಅವರ ಜಮೀನಿನಲ್ಲಿರುವ ಬೋರ್ ವೆಲ್ ಮತ್ತು ಮೋಟಾರ್ ಬಾಕ್ಸ್ ಎಂದು ನೋಡಿ ಒಪ್ಪಿದ ಮೇರೆಗೆ ಅದನ್ನು <u>**ನಿಡಿ.2**</u> ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಫೋಟೋವನ್ನು ತೋರಿಸಿದ್ದು ಅದರಲ್ಲಿರುವ ಪೂರ್ವದಿಂದ ಪಶ್ಚಿಮಕ್ಕೆ ಇರುವ ತೆಂಗಿನ ತೋಟ ತಮ್ಮದು ಎಂದು ನೋಡಿ ಒಪ್ಪಿದ ಮೇರೆಗೆ ಅದನ್ನು <u>**ನಿಡಿ.3**</u> ಎಂದು ಗುರುತಿಸಲಾಯಿತು. ಸರ್ವೇಯರ್ ಪೂರ್ವಕ್ಕೊಂದು ಮತ್ತು ಪಶ್ಚಿಮಕ್ಕೊಂದು ಎಂದು 2 ಕಲ್ಲು ನೆಟ್ಟಿರುತ್ತಾರೆ. North-West ಕೋಣೆಯಲ್ಲಿ ಒಂದು ಕಲ್ಲು, North-East ಕೋಣೆಯಲ್ಲಿ ಒಂದು ಕಲ್ಲು ನೆಟ್ಟಿರುತ್ತಾರೆ.ಇದನ್ನು ತೋರಿಸಲು ಭಾಗಚಿತ್ರ ಹಾಜರುಪಡಿಸಿಲ್ಲ ಹಾಜರುಪಡಿಸಲು ತೊಂದರೆಯಾ ಎಂದರೆ ತೆಗೆದಿರುವುದಿಲ್ಲ.

ಈಗ ಸಾಕ್ಷಿಗೆ ಮತ್ತೊಂದು ಫೋಟೋ ತೋರಿಸಿದ್ದು ಅದರಲ್ಲಿ ಕಾಣುವ ವ್ಯಕ್ತಿ 1 ನೇ ಪ್ರತಿವಾದಿ ಎಂದು ಮತ್ತು ಅವರ ಹಿಂಭಾಗದಲ್ಲಿ ಇರುವ ಬಾಳೇ ತೋಟ ಮತ್ತು ಉಳಿಮೆ ಮಾಡಿದ ಜಮೀನು ಅವರಿಗೆ ಸೇರಿದ ಉತ್ತರ ದಿಕ್ಕಿನ ಜಮೀನು ಎಂದು ನೋಡಿ ಒಪ್ಪಿದ ಮೇರೆಗೆ ಅದನ್ನು <u>**ನಿಡಿ.4**</u> ಎಂದು ಗುರುತಿಸಲಾಯಿತು. ಸದರಿ ಫೋಟೋವಿನಲ್ಲಿ ಕಾಣುವ ಕಲ್ಲು ಕಂಬಗಳು ಇರುವ ಜಾಗದಿಂದ ಉತ್ತರಕ್ಕೆ ಪ್ರತಿವಾದಿಯ ಜಮೀನು ಇದೆ ಎಂದರೆ ನನ್ನ ಜಮೀನು ಸ್ವಲ್ಪ ಇರುತ್ತದೆ ಎಂದು ನುಡಿದಿರುತ್ತಾರೆ. ದಾವಾ ಹಾಕುವ ಕಾಲಕ್ಕೆ 1 ನೇ ಪ್ರತಿವಾದಿಯು ಉಳುಮೆ ಮಾಡುವ ಜಮೀನಿನಲ್ಲಿ ನನ್ನ ಜಮೀನು ಸೇರಿದೆ ಎಂದು ತಿಳಿಸಿರುತ್ತೇನೆ. ಈಗ ಸಾಕ್ಷಿಗೆ ಮತ್ತೊಂದು ಫೋಟೋ ತೋರಿಸಿದ್ದು ಅದರಲ್ಲಿರುವ ಜಮೀನು ಪ್ರತಿವಾದಿಗೆ ಸೇರಿದ ಪೂರ್ವದಿಕ್ಕಿನ ಅಡಿಕೆ ಮತ್ತು ತೆಂಗು ತೋಟ ಎಂದು ಸಾಕ್ಷಿಯು ನೋಡಿ ಒಪ್ಪಿದ ಮೇರೆಗೆ ಸದರಿ ಫೋಟೋವನ್ನು <u>**ನಿಡಿ.5**</u> ಎಂದು ಗುರುತಿಸಲಾಯಿತು.

ಸಿಡಿಯನ್ನು ನಿಡಿ.6 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಮತ್ತೊಂದು ಫೋಟೋ ತೋರಿಸಿದ್ದು ಅದರಲ್ಲಿ ಪಶ್ಚಿಮ ದಿಕ್ಕಿನಲ್ಲಿ ಕಲ್ಲು ನೆಟ್ಟಿರುವ ಜಾಗ ಆಗಿರುತ್ತದೆ ಎಂದರೆ ಸರಿಯಲ್ಲ. ನಿಡಿ.5 ರಲ್ಲಿ ಕಾಣುವ ಕಲ್ಲು ಮತ್ತು ಈಗ ತೋರಿಸಿದ ಫೋಟೋ ನಲ್ಲಿ ಕಾಣುವ ಕಲ್ಲು ಎರಡೂ ಸಹ ವಿಭಾಗವಾದ ಕಾಲಕ್ಕೆ ನೆಟ್ಟಿರುವ ಕಲ್ಲುಗಳು ಎಂದರೆ ಸರಿಯಲ್ಲ. ಪ್ರತಿವಾದಿಯರು ವಿಭಾಗದಂತೆ ಆದ ಗಡಿಗುರುತಿನಂತೆ ಅವರ ಜಮೀನಿನಲ್ಲಿ ಅನುಭವದಲ್ಲಿ ಯಾವತ್ತಿಗೂ ನನ್ನ ಜಮೀನಿನಲ್ಲಿ ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ಅಳತೆ ಕಾರ್ಯ ಮೊದಲಿನಂತೆ ಸರಿಯಾಗಿ ಇರುತ್ತದೆ ಎಂದು ಸರ್ವೇಯರ್ ವರದಿ ನೀಡಿದ್ದು ಅದಕ್ಕೆ ನಾನು ಒಪ್ಪಿಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ವಾದಪತ್ರ ಮತ್ತು ಪ್ರಮಾಣ ಪತ್ರದಲ್ಲಿ ನನ್ನ ಜಮೀನಿಗೆ ಉದಿಬದು ಮಾಡಿಸಿರುವುದಾಗಿ ಹೇಳಿದ್ದು ಈ ಸಂಬಂಧ ಫೋಟೋ ಹಾಜರುಪಡಿಸಿಲ್ಲ. ಹಿಂದಿನಿಂದಲೂ ಉದಿಬದು ಮಾಡಿರುವುದಿಲ್ಲ, ಕಲ್ಲು ನೆಟ್ಟಿ ಗಡಿಗುರುತು ಆಗಿರುತ್ತದೆ ಅದರಂತೆ ಪ್ರತಿವಾದಿಯರು ಅವರ ಜಮೀನಿನ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ ಜಮೀನಿಗೆ ನೀರು ಕೊಡುವುದಿಲ್ಲ ಎಂದು ಹೇಳಿದ ಮೇರೆಗೆ ಅವರ ಏಳಿಗೆ ಸಹಿಸಲಾಗದೆ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನಿನ ಪೂರ್ವ ದಿಕ್ಕಿನಲ್ಲಿ 1 ಗುಂಟೆ ಖರಾಬು ಇದೆ ಎಂದರೆ ಸರಿ. ಸದರಿ ಖರಾಬು ರಸ್ತೆಯನ್ನು ಒಳಗೊಂಡಿರುತ್ತದೆ ಎಂದರೆ ಸರಿ. ಖರಾಬು ಬಿಟ್ಟು ಕಲ್ಲು ನೆಟ್ಟಿರುತ್ತಾರೆ. ಸರ್ವೇಯರ್ ಪೂರ್ವದಿಕ್ಕಿನಲ್ಲಿ ಯಾವುದೇ ಕಲ್ಲು ನೆಟ್ಟಿರುವುದಿಲ್ಲ ಅಲ್ಲಿ ರಸ್ತೆ ಬರುತ್ತದೆ ಕಲ್ಲು ರಸ್ತೆಯ ಮಧ್ಯೆಭಾಗದಲ್ಲಿ ಬರುವ ಕಾರಣ ನೆಟ್ಟಿರುವುದಿಲ್ಲ ಎಂದರೆ ಖರಾಬು ದಕ್ಷಿಣಕ್ಕೆ ಬರುತ್ತದೆ ಎಂದು ಸರ್ವೇಯರ್ ನನಗೆ ಹೇಳಿರುತ್ತಾರೆ. ಎಂತಹ ಖರಾಬು ಎಂದರೆ ಬ-ಖರಾಬು ಇರಬಹುದು ನಿಖರವಾಗಿ ಗೊತ್ತಿಲ್ಲ. ನನ್ನ ಜಮೀನಿನ ಉತ್ತರ ದಿಕ್ಕಿನಲ್ಲಿ ಯಾವುದೇ ಉದಿಬದು ಇಲ್ಲದೇ ಇದ್ದರೂ ಇದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.3 ರಲ್ಲಿಯೂ ಸಹ ಉತ್ತರ ದಿಕ್ಕಿನಲ್ಲಿ ಉದಿ ಬದು ಇರುವ ಕುರುಹು ಇಲ್ಲ ಎಂದರೆ ಕೇವಲ ದಕ್ಷಿಣ ದಿಕ್ಕಿನಲ್ಲಿ ಉದಿ ಬದು ಇರುತ್ತದೆ ಉಳಿದ ದಿಕ್ಕುಗಳಲ್ಲಿ ನನ್ನ ತಂದೆಯವರಕಾಲದಿಂದಲೂ ಉದಿ ಬದು ಹಾಕಿರುವುದಿಲ್ಲ. ನಾನು ಹೇಳಿದಂತೆ ಪ್ರತಿವಾದಿಯರು ಯಾವುದೇ ರೀತಿ ತೊಂದರೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚಿಸಿದೆ)

ಓ.ಹೇ.ಕೇ.ಸರಿ ಇದೆ

**sd/-**

ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಿ.ನಾ.ಹಳ್ಳಿ